# ಅಪಥ್ಯ

ಹೆಂಡತಿ ಮಹಿಳಾ ಸಮಾಜಕ್ಕೆ ಹೋದಳು;
ಹಿಂತಿರುಗುವುದು ಇನ್ನು ಸಂಜೆಗೆ.
ನಾನು ಮಾಮೂಲಿನಂತೆ ಪಾರ್ಕಿಗೆ ಬಂದು ಕೂತೆ,
ಮರದ ನೆರಳಿನ ಒಂದು ಬೆಂಚಿನಲ್ಲಿ.

ನಡುಹಗಲು, ಅಲ್ಲಲ್ಲಿ ನಿವೃತ್ತ ಮಂದಿ
ಪೇಪರೋದುತ್ತ ಅಥವಾ ಹರಟುತ್ತ;
ಕೆಲವರು ಕೈ ಕಾಲು ತಲೆ ಅತ್ತಿಂದಿತ್ತ ಆಡಿಸಿ
ಕೂತಲ್ಲೇ ಕವಾಯತ್ತು ಮಾಡುತ್ತ.

ಅನತಿ ದೂರದ ನನ್ನೆದುರಿನ ಬೆಂಚಿಗೆ ಬಂದು
ಕೂತಿತು ಒಂದು ಜೋಡಿ:
ಹೆಣ್ಣು ಇನ್ನೂ ತರುಣಿ, ಲಕ್ಷಣವಾಗಿದ್ದಳು;
ಗಂಡು ನಡುವಯಸ್ಕ.

ಅವಳು ಏನೋ ಹೇಳಿಕೊಂಡು ಬಿಕ್ಕಿಬಿಕ್ಕಿ ಅತ್ತಳು,
ಅವನ ಭುಜದ ಮೇಲೆ ತಲೆ ಆನಿಸಿ.
ಅವನು ಆಕೆಯ ಬೆನ್ನ ನೇವರಿಸಿ, ಸಂತೈಸಿದ
ನವಿರಾಗಿ ಕಣ್ಣೀರನೊರೆಸಿ.



ಕಲೆ : ವಾಗೀಶ ಹೆಗಡೆ

